<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.150/2023</u>

ದಿಃ 11.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-13 Pw-10

| | | |
|---|---|---|
| ಹೆಸರು | ಃ | ಓಂ ಪ್ರಕಾಶ್ |
| ತಂದೆಯ ಹೆಸರು | ಃ | ಅಂಜನಪ್ಪ ಟಿ ಪಿ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಡಿವೈಎಸ್‌ಪಿ, ಕುಣಿಗಲ್ |
| ವಾಸಸ್ಥಳ | ಃ | ಕುಣಿಗಲ್ |

<u>ಮುಖ್ಯ ವಿಚಾರಣೆಃ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ</u>

ದಿಃ12.07.2022ರಿಂದ ದಿಃ27.11.2023ರವರೆಗೆ ನಾನು ಡಿವೈಎಸ್‌ಪಿ ಚನ್ನಪಟ್ಟಣ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ12.08.2023ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಆದೇಶದಂತೆ ಈ ಕಡತವನ್ನು ಮುಂದಿನ ತನಿಖೆಗೆಂದು ಪ್ರಾಸಾ.9ರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ.

3. ದಿಃ13.08.2023ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಿರ್ಯಾದಿ ನಾಗಮ್ಮ ತೋರಿಸಿದಂತಹ ಸ್ಥಳದಲ್ಲಿ ಪಂಚರಾದ ಪ್ರಾಸಾ.4 ಮತ್ತು 5ರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11.00ರಿಂದ 11.45ರ

ಸಮಯದಲ್ಲಿ ನಡೆಸಲಾಗಿದೆ. ಸದರಿ ಮಹಜರ್ ನಿ.ಪಿ.2 ಇದ್ದು, ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಸಮಯದಲ್ಲಿ ಸ್ಥಳದಲ್ಲಿ ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಯಲಾಗಿದ್ದು, ಅವುಗಳನ್ನು ಈಗ ನೋಡುತ್ತಿದ್ದು ನಿ.ಪಿ.3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ. ಸ್ಥಳದ ಕಚ್ಛಾ ನಕ್ಷೆಯನ್ನೂ ಸಹ ತಯಾರಿಸಲಾಗಿದೆ. ಸದರಿ ಕಚ್ಛಾ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.12 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ಛಾಯಾಚಿತ್ರಗಳನ್ನು ತೆಗೆದಂತಹ ಠಾಣಾ ಸಿಬ್ಬಂದಿಯಾದ ಚಾಸಾ.9 ಅವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65ಬಿರನ್ವಯ ಪ್ರಮಾಣ ಪತ್ರವನ್ನು ಪಡೆಯಲಾಗಿದೆ. ಸದರಿ ಪ್ರಮಾಣ ಪತ್ರವನ್ನು ಸ್ವೀಕರಿಸಿರುವ ಸಲುವಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿ.ಪಿ.13 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು.

4. ದಿಃ14.08.2023ರಂದು ಪಿರ್ಯಾದುದಾರ, ಗಾಯಾಳು ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಕನಕಪುರ ತಹಶೀಲ್ದಾರ್ ಅವರಿಗೆ ಮತ್ತು ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕನಕಪುರ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ. ದಿಃ22.08.2023ರಂದು ಕೃತ್ಯಕ್ಕೆ

ಉಪಯೋಗಿಸಿದ ದ್ವಿಚಕ್ರ ವಾಹನ ಕಪ್ಪು ನೀಲಿ ಮತ್ತು ಸಿಮೆಂಟ್ ಬಣ್ಣದ ದ್ವಿಚಕ್ರ ವಾಹನವಾದ ಕೆಎ-42ಇಇ-9268 ಬಜಾಜ್ 125 ಎಕ್ಸ್ ವಾಹನವನ್ನು ಪ್ರಾಸಾ.8 ತಂದು ಹಾಜರುಪಡಿಸಿದ್ದು ಪಂಚರಾದ ಪ್ರಾಸಾ.6 ಮತ್ತು 7ರ ಸಮಕ್ಷಮ ಬೆಳಿಗ್ಗೆ 11.00ರಿಂದ 12.00 ಗಂಟೆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡು ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆ ನಿ.ಪಿ.5 ಇದ್ದು, ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ದಿಃ11.09.2023ರಂದು ಕನಕಪುರ ತಾಲ್ಲೂಕು ಕಚೇರಿಯಿಂದ ಪಿರ್ಯಾದಿ ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನಿ.ಪಿ.6 ಎಂದು ಈಗಾಗಲೇ ಗುರುತಿಸಿದ್ದು ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

5. ದಿಃ21.09.2023ರಂದು ಪಿರ್ಯಾದಿ ನಾಗಮ್ಮನ ಮುಂದುವರಿದ ಹೇಳಿಕೆ, ಗಾಯಾಳು ರವೀಶ್‌ನ ಹೇಳಿಕೆ ಮತ್ತು ಸಾಕ್ಷಿ ಶಿವಣ್ಣ ಮತ್ತು ಉದೇಶ್ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ05.10.2023ರಂದು ಗಾಯಾಳು ರವೀಶ್ ಅವರ ಗಾಯದ ಪ್ರಮಾಣ ಪತ್ರವನ್ನು ಕನಕಪುರ ಸರ್ಕಾರಿ ಆಸ್ಪತ್ರೆಯಿಂದ ಸ್ವೀಕರಿಸಿ ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸದರಿ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.14 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಮುಕ್ತಾಯಗೊಳಿಸಿ ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಇರುವ ಕಾರಣ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ</u>

ಪಿರ್ಯಾದುದಾರಳ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ, ಇಲ್ಲ ಎಂದು ಉತ್ತರಿಸಿರುತ್ತಾರೆ. ಕೃತ್ಯದ ಸ್ಥಳದ ನಕ್ಷೆಯಲ್ಲಿ ಕಾಣಿಸಿರುವಂತಹ ಜಾಗದ ಪೂರ್ವದಲ್ಲಿ ಪಿರ್ಯಾದಿ ನಾಗಮ್ಮನ ಮನೆಯ ಶೆಡ್ಡಿನ ಮನೆ ಹಾಗೂ ತೆಂಗಿನ ಮರ ಇದ್ದು, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಕಲ್ಲಿನ ದಿಂಡು ಮತ್ತು ದಕ್ಷಿಣಕ್ಕೆ ಆರೋಪಿ ರವಿ ಅವರ ಮನೆ ಇದೆ. ಆರೋಪಿಯ ಮನೆಯ ಮುಂಭಾಗ ಉತ್ತರದ ದಿಕ್ಕಿಗಿದೆ. ಆರೋಪಿಯ ಮನೆ ಮತ್ತು ಪಿರ್ಯಾದಿಯ ಮನೆಯ ನಡುವೆ ಖಾಲಿ ಜಾಗ ಇದೆ ಎಂದರೆ ಸರಿ. ಆರೋಪಿಯ ಮನೆಗೆ ಬರಲು ಉತ್ತರ ದಿಕ್ಕನ್ನೇ ಬಳಸಿಕೊಂಡು ಬರಬೇಕು ಎಂದರೆ ಸರಿಯಲ್ಲ. ಸಾಕ್ಷಿ ಸ್ವಯಂ ಹೇಳುತ್ತಾರೆ ಪೂರ್ವ ದಿಕ್ಕಿನಿಂದಲೂ ಬರಬಹುದು. ಸಾಕ್ಷಿಗೆ ನಿ.ಪಿ.12ನ್ನು ತೋರಿಸಿ ಆರೋಪಿಯ ಮನೆಗೆ ಉತ್ತರ

ಭಾಗದಿಂದಲೇ ಬರಬೇಕು ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರಿಸಿರುತ್ತಾರೆ. ಆರೋಪಿ ಮತ್ತು ಆತನ ಮನೆಯವರು ಉತ್ತರ ಭಾಗವನ್ನು ಬಳಸಿಕೊಂಡು ಅವರ ಮನೆಗೆ ಬರುವ ವಿಚಾರವಾಗಿ ಪಿರ್ಯಾದಿ ಯಾವಾಗಲೂ ಜಗಳ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಹಲವಾರು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಊರಿನಲ್ಲಿ ಪಂಚಾಯ್ತಿ ಮಾಡಿ ಆರೋಪಿಗೆ ಉತ್ತರ ಭಾಗವನ್ನು ಬಳಸಿಕೊಂಡು ಹೋಗಲು ದಾರಿ ಮಾತ್ರ ಇದ್ದು ಆ ಕಾರಣ ಆತ ಅದನ್ನು ಬಳಸಿಕೊಳ್ಳಲಿ ಎಂದು ತೀರ್ಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ಪ್ರಾಸಾ.1ರಿಂದ 3 ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ಸರಿ. ಸ್ಥಳ ತನಿಖೆಗೆ ಪ್ರಾಸಾ.5 ಮತ್ತು 6 ಬಂದಿರಲಿಲ್ಲ, ನಿ.ಪಿ.2ನ್ನು ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. ದಿಃ22.08.2023ರಂದು ಕೃತ್ಯಕ್ಕೆ ಉಪಯೋಗಿಸಲಾಗಿದೆ ಎಂದು ಹೇಳುವಂತಹ ದ್ವಿಚಕ್ರ ವಾಹನ ಕಪ್ಪು ನೀಲಿ ಮತ್ತು ಸಿಮೆಂಟ್ ಬಣ್ಣದ ದ್ವಿಚಕ್ರ ವಾಹನವಾದ ಕೆಎ-42ಇಇ-9268 ಬಜಾಜ್ 125 ಎಕ್ಸ್ ನ್ನು ಪ್ರಾಸಾ.8 ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ.5ನ್ನು ಯಾವುದೇ ಪಂಚರ ಸಮಕ್ಷಮ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೇಲೆ ಹೇಳಿರುವ ದ್ವಿಚಕ್ರ ವಾಹನ ಬಳಕೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

3. ಪ್ರಾಸಾ.1ರ ಮುಂದುವರೆದ ಹೇಳಿಕೆ ಹಾಗೂ ಪ್ರಾಸಾ.2ರಿಂದ 4ರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಜಾತಿ ಪ್ರಮಾಣ ಪತ್ರವನ್ನು ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳ ಉತ್ತರ ಭಾಗದ ಜಾಗವನ್ನು ಪಿರ್ಯಾದುದಾರರು ಕಬಳಿಸಲು ಸುಳ್ಳು ದೂರನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ದೂರು ಕೊಟ್ಟರೆ ಆರೋಪಿಯನ್ನು ಹೆದರಿಸಿ ಆ ಜಾಗವನ್ನು ಬಳಸದಂತೆ ಮಾಡಬಹುದು ಎಂಬ ಕಾರಣದಿಂದ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ. ಕೂಲಂಕುಷವಾಗಿ ತನಿಖೆ ಮಾಡದೇ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.